

# ಆರ್ಯನ್ ಪ್ರಯೋಗ ಪಥ...

■ **ಎಸ್ಸೆನ್**

◆ ಸಿನಿಮಾ ನಿರ್ದೇಶನದ ಆಲೋಚನೆ ಜೀವಪಡೆದದ್ದು ಹೇಗೆ?

ಸಿನಿಮಾರಂಗಕ್ಕೆ ಬಂದಾಗಿನಿಂದಲೂ ಕಥೆ ಹೇಳಬೇಕು, ಕಥೆಗೆ ನಿರ್ದೇಶನ ಮಾಡಬೇಕು ಎಂಬಾಸೆ ಇತ್ತು. ಕಥೆಯನ್ನು ಪರದೆ ಮೇಲೆ ತರಲು ಒಂದಷ್ಟು ಅನುಭವಗಳು ಬೇಕು. ಒಂದು ಸಿನಿಮಾ ಮಾಡಿದ ತಕ್ಷಣ ನಿರ್ದೇಶಕ ಎನಿಸಿಕೊಳ್ಳಲು ಆಗುವುದಿಲ್ಲ. 'ಚೆಂಕೋಲ್' ಸಿನಿಮಾದಲ್ಲಿಯೂ ನಾನು ನಿರ್ದೇಶಕ ಎಂದು ಎಲ್ಲಿಯೂ ಹಾಕಿಕೊಂಡಿಲ್ಲ. ನಿಜಾರ್ಥದಲ್ಲಿ ನಿರ್ದೇಶನ ಎಂಬುದು ಸಾಧ್ಯವಾದಾಗ ಹೆಸರು ಹಾಕಿಕೊಳ್ಳುತ್ತೇನೆ. ನಿರ್ದೇಶನ ತಪಸ್ಸಿನ ಹಾಗೆ.

ನಾನು ಸಿನಿಮಾರಂಗಕ್ಕೆ ಬಂದು 15 ವರ್ಷಗಳಾದವು. 'ಕಲ್ಲರಳಿ ಹೂವಾಗಿ' ಸಿನಿಮಾದಿಂದ ನನ್ನ ಸಿನಿ ಪಯಣ ಆರಂಭವಾಯಿತು. 'ಮಾತಾಡ್ ಮಾತಾಡ್ ಮಲ್ಲಿಗೆ', 'ಹುಡುಗಾಟ', 'ರಾಕಿ'... ಹೀಗೆ ಒಂದಷ್ಟು ಸಿನಿಮಾಗಳಲ್ಲಿ ನಟಿಸಿದೆ. 'ನೂರು ಜನ್ಮಕೂ' ಸಿನಿಮಾ ಮಾಡುವಾಗ ಹಲವು ನಟರು ಬೆಂಬಲ ಸೂಚಿಸಿದರು. ಸಿನಿಮಾ ನಿರೀಕ್ಷಿಸಿದಷ್ಟು ಯಶಸ್ಸು ಗಳಿಸಲಿಲ್ಲ. ಆನಂತರ 'ಬಿಗ್ ಬಾಸ್'ಗೆ ಬಂದೆ. 'ಪ್ಯಾಟೆ ಹುಡ್ಗೀರ್ ಹಳ್ಳಿ ಲೈಫು' ಮಾಸ್ ಜನರಿಗೆ ನನ್ನನ್ನು ಪರಿಚಯಿಸಿತು. 'ಡಿಯರ್ ಸತ್ಯ' ಸಿನಿಮಾ ಮಾಡಿದಾಗ ಬೇಸರವಾಯಿತು. ಆಗ ಒಂದು ನಿರ್ಧಾರ ತೆಗೆದುಕೊಂಡೆ. ಅಲ್ಲಿಂದ ನಿರ್ದೇಶನದತ್ತ ಆಲೋಚಿಸಿದೆ.

◆ ನಿರ್ದೇಶನಕ್ಕೆ ಬರಲು ಪ್ರೇರಣೆ ಏನು?

'ಕಾಂತಾರ', 'ಕೆಜಿಎಫ್'ನಂಥ ಸಿನಿಮಾಗಳನ್ನು ನೋಡಿದಾಗ, ನನಗೆ ಅನ್ನಿಸಿದ್ದು ಒಂದೇ, ಒಂದು ಆಲೋಚನೆಯನ್ನು ಕಾರ್ಯರೂಪಕ್ಕೆ ಇಳಿಸಲು ಗಟ್ಟಿ ಮನಸ್ಸು ಮಾಡಬೇಕು. ಒಮ್ಮೆ ಆ ನಿರ್ಧಾರ ತೆಗೆದುಕೊಂಡರೆ ಅಂತಃಶಕ್ತಿ ಮುಂದುವರೆಸಿಕೊಂಡು ಹೋಗುತ್ತದೆ. ಅಂಥ ನಿರ್ಧಾರ ತೆಗೆದುಕೊಳ್ಳಲು 15 ವರ್ಷ ಬೇಕಾಯಿತು. ನನ್ನ ಕಥೆಯನ್ನು ನನ್ನದೇ ದೃಷ್ಟಿಕೋನದಲ್ಲಿ ಮಾಡೋಣ ಎಂದು ನಿರ್ಧರಿಸಿದೆ.

# ಸೀತೆಯಾದ ಪ್ರಿಯಾಂಕಾ ಕುಮಾರ್

ಕೀರ್ತಿ ಕೃಷ್ಣಪ್ಪ ನಿರ್ದೇಶನದಲ್ಲಿ ಮೂಡಿಬರುತ್ತಿರುವ, ಕಾರ್ತಿಕ್ ಮಹೇಶ್ ಅಭಿನಯದ 'ಸೀತಾ ರಾಮ ರಾಜು' ಸಿನಿಮಾ ಚಿತ್ರೀಕರಣ ಈಚೆಗೆ ಆರಂಭವಾಗಿದ್ದು, ಸೀತಾ ಪಾತ್ರದಲ್ಲಿ ಪ್ರಿಯಾಂಕಾ ಕುಮಾರ್ ಕಾಣಿಸಿಕೊಳ್ಳುತ್ತಿದ್ದಾರೆ.

ಸೂರಿ ನಿರ್ದೇಶನದ 'ಬ್ಯಾಡ್ ಮ್ಯಾನರ್ಸ್', ರಿಷಿ ಜೊತೆಗೆ 'ರುದ್ರ ಗರುಡ ಪುರಾಣ', ಮಂಸೋರೆ ನಿರ್ದೇಶನದ 'ದೂರ ತೀರ ಯಾನ' ಸಿನಿಮಾದಲ್ಲಿ ನಟಿಸಿದ್ದ ಪ್ರಿಯಾಂಕಾ ಕುಮಾರ್, ಈ ಸಿನಿಮಾದಲ್ಲಿ ಕಾರ್ತಿಕ್‌ಗೆ ಜೋಡಿಯಾಗಿದ್ದಾರೆ. ಸೀತಾ, ರಾಮ, ರಾಜು ಎಂಬ ಮೂರು ಪಾತ್ರಗಳ ಹೆಸರನ್ನೇ ಶೀರ್ಷಿಕೆಯಾಗಿ ಇಡಲಾಗಿದೆ. ರವಿಶಂಕರ್ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ವಿಶೇಷವಾಗಿದೆ.

ಸಿನಿಮಾ ಬಗ್ಗೆ ಮಾತನಾಡಿರುವ ಕೀರ್ತಿ, 'ಕಾರ್ತಿಕ್ ಮಹೇಶ್ ಹಾಗೂ ಪ್ರಿಯಾಂಕಾ ಕುಮಾರ್ ಜೋಡಿ ಆಸಕ್ತಿದಾಯಕವಾಗಿರಲಿದೆ' ಎಂದು ಮಾತು ಸೇರಿಸಿದ್ದಾರೆ.

'ಹೊಸ ಹಾಗೂ ಪ್ರತಿಭಾನ್ವಿತ ಕಲಾವಿದರು, ತಂತ್ರಜ್ಞರೊಂದಿಗೆ ಕೆಲಸ ಮಾಡುತ್ತಿರುವುದು ಬಹಳ ಖುಷಿಯಿದೆ. ಸೀತಾ ಪಾತ್ರಕ್ಕೆ ಬೇರೆಯದೇ ಆರ್ಕ್ ಇದೆ. ಎಕ್ಸ್‌ಪ್ಲೋರ್ ಮಾಡಲು ಈ ಪಾತ್ರದಲ್ಲಿ ಹಲವು ಪದರಗಳಿವೆ. ಈ ಪಾತ್ರದಿಂದ ಕಲಿಯಲು ನನಗೆ ಸಾಕಷ್ಟಿದೆ' ಎಂದು ಪ್ರಿಯಾಂಕಾ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ■

